ಡಾ. ವಿ. ಪುಗಳೇಂದಿ, ಬಳ್ಳಾರಿ
ವಧು ಪರೀಕ್ಷೆಯ ಸಮಯದಲ್ಲಿ ವರನ ನಿರೀಕ್ಷೆ ಏನಾಗಿರುತ್ತದೆ ಬಾಸ್?



ಹುಸಿಯಾಗಿರುತ್ತದೆ.

ವಿ. ಹೇಮಂತಕುಮಾರ್, ಬೆಂಗಳೂರು
ಯಾರ ಮನಸ್ಸು ಒಳ್ಳೆಯದಾಗಿರುತ್ತದೋ ಅವರ ಹಣೆಬರಹ ಕೆಟ್ಟದಾಗಿರುತ್ತಂತೆ. ಹೌದಾ ಸರ್?
ಯಾರು, ಏನು ಎಂದು ತಿಳಿಯದೆ ಮಾತು ಕೊಡುವ ಕರ್ಣನಂತೆ ಮೊದ್ದುಮೊದ್ದಾಗಿದ್ದರೆ ಮಾತ್ರ.

ಅಂಚೆ ಸುಬ್ರಹ್ಮಣ್ಯ, ಕೊಪ್ಪ
ಆಂಜನೇಯ ಹುಟ್ಟಿದ್ದು ಆಂಧ್ರದಲ್ಲಂತೆ. ನಮ್ಮಲ್ಲಿ ಬಹಳ ಕಾಣಿಸುತ್ತಿವೆ. ಯಾವಾಗ ಕಳಿಸೋದು ರಾಮ್?
ಕಳಿಸುವ ಬಾಬ್ತೇ ಇಲ್ಲ. ಕರ್ನಾಟಕ ಇತರ ರಾಜ್ಯಗಳಿಂದ ಬಂದವರಿಗೆ ಒನ್‌ವೇ.

ನಾಜ್ಯೋತಿ, ಹೂವಿನಹಡಗಲಿ
ಲೈನ್ ಹೊಡೆಯುವಾಗ ಒಂದೇ ಕಣ್ಣನ್ನು ಮಿಟುಕಿಸುವುದೇಕೆ?



ಆಕಡೆ ಈಕಡೆಯವರ ಮೇಲೆ ಒಂದು ಕಣ್ಣು ಇಟ್ಟಿರಬೇಕಲ್ಲ.

ಬಿ.ಆರ್. ಉಷಾ, ಬೆಂಗಳೂರು
ಬಾಯಿಬಡುಕಿ ಇದ್ದಾಳೆ. ಬಾಯಿಬಡುಕ ಇದ್ದಾರಾ?
ಏನಚ್ಚರಿ! ತಾವು ಅರ್ನಬ್ ಗೋಸ್ವಾಮಿಯನ್ನೇ ನೋಡಿಲ್ಲವೆ?

ವಿಜಯಕುಮಾರ್ ಎಚ್.ಕೆ. ರಾಯಚೂರು
ಕ್ರಿಕೆಟಿಗರು ಸರಿಯಾಗಿ ಆಡದಿದ್ದರೆ ಕೋಪಿಸಿಕೊಳ್ಳುತ್ತೇವೆ. ಚುನಾಯಿತರು ಸರಿಯಾಗಿ ಕೆಲಸ ಮಾಡದಿದ್ದರೆ ಕೋಪಿಸಿಕೊಳ್ಳುವುದಿಲ್ಲ. ಏಕೆ?
ಇಬ್ಬರದೂ ನಿಜವಾದ ಯೋಗ್ಯತೆ ತಿಳಿದಿರುವುದರಿಂದ.

ನಂದಕುಮಾರ್ ಎಚ್.ಎಸ್. ಮಂಗಳೂರು
ಸ್ವರ್ಗಕ್ಕೆ ಅಂತರಿಕ್ಷ ನೌಕೆಯಲ್ಲಿ ಹೋಗಿ ಬರಬೇಕೆಂದಿದ್ದೇನೆ. ಭೂಮಿಯಿಂದ ಸ್ವರ್ಗಕ್ಕೆ ದೂರವೆಷ್ಟು?
ಬ್ರಹ್ಮನ ಒಂದು ಕಿಲೋಮೀಟರ್‌ನಷ್ಟು.

ಆರ್. ಮಧುಸೂದನ್, ಹಾಸನ
ಪಾರಿಜಾತ ಹೂವು ಅರಳಿದ ತಕ್ಷಣ ಉರುಳುವುದು ಏಕೆ?
(ಪಾರಿ)ಜಾತಸ್ಯ ಹಿ ಧ್ರುವೋ ಮೃತ್ಯುಃ ಎಂದು ಶ್ರೀಕೃಷ್ಣನೇ ಹೇಳಿದ್ದಾನಲ್ಲ!

ಟಿ.ಎಂ. ಮಾನಪ್ಪ, ಶಿವಮೊಗ್ಗ
ಸಿನಿಮಾ ರಂಗಕ್ಕೆ ಸ್ಯಾಂಡಲ್ವುಡ್, ಬಾಲಿವುಡ್, ಟಾಲಿವುಡ್, ಕಾಲಿವುಡ್ ಎನ್ನುವುದೇಕೆ?
ವುಡ್ (ಮರ)ನಂತೆ ಭಾವರಹಿತ ಮುಖವುಳ್ಳ ನಟನಟಿಯರೇ ಹೆಚ್ಚಾಗಿರುವುದರಿಂದ.

ಪಿ.ಜೆ. ರಾಘವೇಂದ್ರ, ಮೈಸೂರು
ಮಹಾಮಾರಿಗಿಂತ ಕೂಗುಮಾರಿಗಳೇ ಹೆಚ್ಚು ಭಯ ಹುಟ್ಟಿಸುತ್ತಿದ್ದಾರಲ್ಲಾ ಸಾ...?
ವೃತ್ತಿಧ(ಕ)ರ್ಮ. (ನಮ್ಮ) ಭಯವೇ (ಅವರ) ಥೈಲಿಯ ಮೂಲವಯ್ಯಾ...

ಮಂಡಿ ಕುಮಾರ್, ಬೆಂಗಳೂರು
ಹೆಣ್ಣು ಶೃಂಗಾರ ಮಾಡಿಕೊಳ್ಳುವ ಉದ್ದೇಶವಾದರೂ ಏನು?
ಗಂಡನ್ನು ಸುಷುಪ್ತಿಯಿಂದ ಹೊರತರಲು ಬಣ್ಣ, ವಾಸನೆ ಅಗತ್ಯವಂತೆ.

ಅನಸೂಯ ತ್ರಿವಿಕ್ರಮ, ಕೇದಿಗೆಮನೆ
ನೂರು ವರ್ಷ ಬದುಕಬೇಕೆಂದಿರುವೆ. ಅದಕ್ಕೇನು ಮಾಡಬೇಕು?
ಯಾವುದೇ ಕಾರಣಕ್ಕೂ ಅಲ್ಲಿಯವರೆಗೆ ಉಸಿರಾಟ ನಿಲ್ಲಿಸಬಾರದು.

ಸಿಹಿಮೊಗೆ ರಮೇಶ್, ಮೈಸೂರು
ಕೊರೊನಾದಿಂದ ನಾವು ಕಲಿಯಬೇಕಾದ ಪಾಠ?
ನಿಮ್ಮ ನೆಗಡಿ ನಿಮ್ಮ ಮೂಗಿನ ಗಡಿ ದಾಟದಿರಲಿ ಎಂದು.

## ಬಹುಮಾನಿತ ಪ್ರಶ್ನೆ

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಕಾನೂನು ಎಲ್ಲರಿಗೂ ಒಂದೇ ಆದರೂ ಕಾನೂನಿನ ಕಬಂಧ ಬಾಹುಗಳು ಬಡವರನ್ನೇ ಹಿಡಿಯುವುದೇಕೆ?
ಕಾನೂನನ್ನು ತಪ್ಪಿಸಿಕೊಳ್ಳಲು ಅವಶ್ಯವಾದ ಫ್ಲೈಟ್ ಚಾರ್ಜ್ ಇಲ್ಲವಾದ್ದರಿಂದ.

ಹೆಚ್.ವಿ. ರಂಗನಾಥ ಶರ್ಮ, ಬೆಂಗಳೂರು
ರಾಜಕಾರಣಿಗಳು ಪದೇಪದೇ ನಾವೇನು ದೀಕ್ಷೆ ತೆಗೆದುಕೊಂಡಿದ್ದೇವೆಯೇ ಎನ್ನುವುದೇಕೆ?
ಪ್ರಮಾಣವಚನವೇ ಅರ್ಥವಾಗದವರಿಗೆ ಎಲ್ಲೆಲ್ಲಿ ಏನೇನು ಹೇಳಿದ್ದೇವೋ ಎಂಬ ಸಂದೇಹ ಇರುತ್ತೆ.

ಎಂ.ಎಸ್. ಗುರುರಾಜಾಚಾರ್, ಬಳ್ಳಾರಿ
ಹಣ ಮರದಲ್ಲಿ ಬೆಳೆದರೆ ದೇಶ ಹೇಗಿರುತ್ತೆ?
ಅಕ್ರಮ ಮರಕಟುಕರಿಂದ ತುಂಬಿ ತುಳುಕತ್ತೆ.

ಗಂಜಾಂ ನಾಗರಾಜ, ಮೈಸೂರು
ಇನ್ನೂ ಕೆಲವು ಮಂಗಗಳು ಮನುಷ್ಯರಾಗದೇ ಮರಗಳ ಮೇಲೇ ಉಳಿದಿವೆಯಲ್ಲಾ?



ಮಂಗನಂತಾಡುವ ಮನುಷ್ಯರನ್ನು ಕಂಡು ಮನುಷ್ಯತ್ವವಿರುವ ಮಂಗನಾಗಿರುವುದೇ ಉತ್ತಮ ಎನಿಸಿತಂತೆ.

ಎಸ್.ಬಿ. ಮಲ್ಲಿಕಾರ್ಜುನ, ಸುರಧೇನುಪುರ
ನಂಬಿಕೆಯೇ ದೇವರು. ಹಾಗಾದರೆ ಮೂಢನಂಬಿಕೆ?
ಕ್ಷುದ್ರ ದೇವತೆ.

ಸುಬ್ಬಲಕ್ಷ್ಮಿ ಹೆಚ್.ಕೆ. ಕೋಲಾರ
ಕೊರೊನಾದ ಎಕ್ಸ್‌ಪೈರಿ ದಿನ ತಿಳಿಸಿ?
ದೇಶದ ಜನರೆಲ್ಲ ಜವಾಬ್ದಾರಿಯುತ ನಾಗರಿಕರಾದ ದಿನವೇ ಅದರ ಮರಣ.

ಜ್ಯೋತ್ಸ್ನಾ, ಕಡಬ
ಸ್ತ್ರೀಯರಂತೆ ಪುರುಷರೂ ಧಾರಾವಾಹಿ ಪ್ರಿಯರಾದರೆ ಸಂಸಾರ ಏನಾಗಬಹುದು?
ಸ್ವಿಗ್ಗಿ, ಬಿಗ್ ಬಾಸ್ಕೆಟ್, ಝೊಮಾಟೊಗಳ ಕಾಯಂ ಗಿರಾಕಿ ಆಗಬಹುದು.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in